ದಿನಾಂಕ 13-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಈ ದಿನ ನ್ಯಾಯಾಲಯದಲ್ಲಿ 2 ನೇ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

<u>ಅನುಮತಿಯ ಮೇರೆಗೆ ಮುಂದುವರೆದ ಮುಖ್ಯವಿಚಾರಣೆ ಸ.ಸ.ಅ ರವರಿಂದಃ-</u>

ಸಾಕ್ಷಿಯು ಕಡತದಲ್ಲಿರುವ ಎಲ್ಲಾ ನಿಶಾನೆಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಕಡತದಲ್ಲಿರುವ ಎಲ್ಲಾ ಫೋಟೋಗಳನ್ನು, ಮು. ಮಾ. ಗಳನ್ನು ನೋಡಿ ಗುರುತಿಸಿರುತ್ತಾರೆ.

<u>ಅನುಮತಿಯ ಮೇರೆಗೆ ಪಾಟೀಸವಾಲುಃ 1 ನೇ ಆರೋಪಿ ಪರ ವಕೀಲರಿಂದಃ-</u>

1. ಯಾವ ಯಾವ ದಾಖಲೆಗಳ ಆಧಾರದ ಮೇಲೆ ಈ ಕೃತ್ಯಕ್ಕೆ ಭಾಗಿಯಾಗಿದ್ದಾರೆಂದು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಆರೋಪಿತರು ಫೈನಾನ್ಸ್‌ನಲ್ಲಿ ಬರೆದುಕೊಟ್ಟ ತಪ್ಪೊಪ್ಪಿಗೆ ಪತ್ರಗಳು, ಆರೋಪಿತರು ಹಣ ದುರುಪಯೋಗ ಮಾಡಿಕೊಂಡ ಆಡಿಟ್ ವರದಿ, ಲೆಕ್ಕ ಪತ್ರ ತಪಶೀಲು, ಆರೋಪಿತರು ದುರುಪಯೋಗ ಪಡಿಸಿಕೊಂಡ ಯಾದಿ, ಕಂಪನಿಯವರು ದೂರು ಕೊಡಲು ನೀಡಿದ ಆದೇಶದ ಪ್ರತಿ, ಆರೋಪಿತರ ಹಾಜರಾತಿ ಪುಸ್ತಕದ ಪ್ರತಿಗಳು, ನನ್ನ ಹಿಂದಿನ ತನಿಖಾಧಿಕಾರಿಳು 1 ನೇ ಆರೋಪಿಯಿಂದ ವಶಪಡಿಸಿಕೊಂಡ ಹಣ & ಸಾಕ್ಷಿದಾರರ ಹೇಳಿಕೆಗಳ ಆಧಾರದ ಮೇಲೆ ಹೇಳುತ್ತಿದ್ದೇನೆ ಎನ್ನುತ್ತಾರೆ.

2. ಆಡಿಟ್ ರವರು ಯಾವ ಯಾವ ದಾಖಲೆಗಳ ಆಧಾರದ ಮೇಲೆ ವರದಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು 23 ಜನರ ನಕಲಿ ದಾಖಲೆಗಳನ್ನು ಗೋಲ್ಡ್ ಲೋನ್ ಮಾಡಿದಂತೆ ಸೃಷ್ಟಿಸಿದ & ಆಡಿಟ್ ತಂಡವು 291 ಪಾಕೆಟ್‌ಗಳನ್ನು ಪರಿಶೀಲಿಸಿ, ಅದರಲ್ಲಿ 23 ಪಾಕೆಟ್‌ಗಳಲ್ಲಿ ದುರುಪಯೋಗ ಆಗಿದ್ದನ್ನು ಕಂಡು ಹಿಡಿದ ಆಧಾರದ ಮೇಲೆ ವರದಿ ಕೊಟ್ಟಿರುತ್ತಾರೆ ಎನ್ನುತ್ತಾರೆ.

3. ದುರುಪಯೋಗ ಆದ ಅವಧಿಯ ದಿ. 25-06-2013 ರಿಂದ 22-08-2013 ಎಂದರೆ ಸರಿ.

4. ಅಂತಿಮ ವರದಿಯನ್ನು ಹಾಕುವುದಕ್ಕಿಂತ ಮುಂಚೆ ನಾನು ಜ್ಯುವೆಲ್ ಸ್ಟಾಕ್ ರಿಜಿಸ್ಟರನ್ನು ಪರಿಶೀಲಿಸಿಲ್ಲ. ಸದರಿ ಅವಧಿಯಲ್ಲಿ ಸ್ಟಾಕ್ ರಿಜಿಸ್ಟರ್‌ಗೆ ಯಾರು ಯಾರು ಸಹಿ ಮಾಡಿದ್ದರು ಎಂದು ನಾನು ಪರಿಶೀಲಿಸಿಲ್ಲ. ಸ್ಟಾಕ್ ರಿಜಿಸ್ಟರನ್ನು ಪರಿಶೀಲಿಸುವವರೆ ಟ್ರಜರಿ ಆಪರೇಟ್

ಮಾಡುತ್ತಿರುತ್ತಾರೆ ಎಂದರೆ ಸರಿ. ನಿಪಿ-5 ರಲ್ಲಿ ಈ ಮೇಲ್ಕಂಡ ಅವಧಿಯಲ್ಲಿ 1 ನೇ ಆರೋಪಿಯ ಸಹಿ ದಿ.16-08-2013 ರಂದು ಮಾತ್ರ ಇರುತ್ತದೆ ಎಂದರೆ ಸಾಕ್ಷಿಯು ನಾನು ರಿಜಿಸ್ಟರನ್ನು/ನಿಪಿ-5 ನ್ನು ಪರಿಶೀಲಿಸಿಲ್ಲ ಎನ್ನುತ್ತಾರೆ.

5. ಗೋಲ್ಡ್ ರಿಜಿಸ್ಟರ್, ನಿಪಿ-5 & ರಿಡಮ್ಷನ್ ರಿಜಿಸ್ಟರನ್ನು ಪರಿಶೀಲನೆ ಮಾಡಿದವರು ಸಹಿ ಹಾಕುತ್ತಾರೆ ಎಂದರೆ ಸಾಕ್ಷಿಯು ನಾನು ರಿಜಿಸ್ಟರನ್ನು ಪರಿಶೀಲಿಸಿಲ್ಲ ಎನ್ನುತ್ತಾರೆ. ನಿಪಿ-5 ರಲ್ಲಿ ದಿ.25-06-2013 ರಂದು ಸದರಿ ರಿಜಿಸ್ಟರನ್ನು ಪರಿಶೀಲಿಸಿದ ಬಗ್ಗೆ ಸಹಿ ಹಾಕಿರುತ್ತಾರೆ ಎಂದರೆ ಸಾಕ್ಷಿಯು ಸ್ಟಾಕ್ ರಿಜಿಸ್ಟರನ್ನು ನಾನು ಪರಿಶೀಲಿಸಿಲ್ಲ ಎನ್ನುತ್ತಾರೆ. ಸಾಕ್ಷಿಗೆ ನಿಪಿ-5 ರ ಭಾಗವನ್ನು ತೋರಿಸಿ ಇದರಲ್ಲಿ ದಿ.25-06-2013 ರಂದು ಪರಿಶೀಲಿಸಿದ ಬಗ್ಗೆ ಸಹಿ & ದಿನಾಂಕ ಇದೆ ಎಂದರೆ ಸಾಕ್ಷಿಯು ನಾನು ವರದಿಗಳ ಆಧಾರದ ಮೇಲೆ ನನ್ನ ಅಂತಿಮ ವರದಿಯನ್ನು ಹಾಕಿರುತ್ತೇನೆಯೇ ಹೊರತು ನಿಪಿ-5 ರ ಆಧಾರದ ಮೇಲೆ ಅಲ್ಲ ಎನ್ನುತ್ತಾರೆ. ಸಾಕ್ಷಿಗೆ ನಿಪಿ-5 ನ್ನು ತೋರಿಸಿ ಈ ದಿನ ನೀವು ಅದನ್ನು ಪರಿಶೀಲನೆ ಮಾಡಿ ಹೇಳಿ ಎಂದಿದ್ದು, ಸಾಕ್ಷಿಯು ಸದರಿ ಭಾಗವನ್ನು ನೋಡಿ ಹೌದು ನಮೂದು ಇದೆ ಎಂದು ಗುರುತಿಸಿದ್ದರಿಂದ ಸದರಿ ಭಾಗವನ್ನು **ನಿಪಿ-5(ಎ)** ಎಂದು ಗುರುತಿಸಲಾಯಿತು. ದಿ.24-08-2013 ರಂದು ಆಡಿಟ್ ಮಾಡಿದಂತೆ ನಿಪಿ-60 ನ್ನು ಸಲ್ಲಿಸಿರುತ್ತೀರಿ ಎಂದರೆ ಸರಿ.

6. ದಿ.24-08-2013 ರಂದು ನಿಪಿ-5 ನ್ನು ಆಡಿಟರ್ ಪರಿಶೀಲನೆ ಮಾಡಿದ ನಮೂದು ಇಲ್ಲ ಎಂದರೆ ಸರಿ. ಸ್ಟಾಕ್ ಎಷ್ಟು ಹೋಗಿದೆ, ರಿಡಮ್ಷನ್ ಎಷ್ಟು ಹೋಗಿದೆ ಎಂಬುದನ್ನು ಪರಿಶೀಲನೆ ಮಾಡದೆ ಆರೋಪಿತರು ಮೋಸ & ದುರುಪಯೋಗ ಮಾಡಿದ್ದಾರೆಂದು ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ ಎಂದರೆ ಸಾಕ್ಷಿಯು ಹಾಗೇನಿಲ್ಲ ಎನ್ನುತ್ತಾರೆ. ಸ್ಟಾಕ್ ರಿಜಿಸ್ಟರ್‌ನಲ್ಲಿ ಎಷ್ಟಿತ್ತು ಎಂದು ಹೇಗೆ ತೀರ್ಮಾನಕ್ಕೆ ಬಂದಿರುತ್ತೀರಿ ಎಂದರೆ ಸಾಕ್ಷಿಯು ಸ್ಟಾಕ್ ರಿಜಿಸ್ಟರ್‌ನ ಆಧಾರದ ಮೇಲೆ ನಿರ್ಧಾರಕ್ಕೆ ಬಂದಿರುತ್ತೇನೆ ಎನ್ನುತ್ತಾರೆ. ಬಂಗಾರವನ್ನು ಮರಳಿ ತೆಗೆದುಕೊಂಡು ಹೋಗಿದ್ದೆಷ್ಟು, ಉಳಿದಿದ್ದೆಷ್ಟು ಎಂದು ನಿರ್ಧಾರಕ್ಕೆ ಬಂದಿರಿ ಎಂದರೆ ಸಾಕ್ಷಿಯು ಆಡಿಟ್ ನ ವರದಿಯ ಮೇಲೆ ನಿರ್ಧಾರಕ್ಕೆ ಬಂದಿದ್ದೇನೆ ಎನ್ನುತ್ತಾರೆ. ಸದರಿ ವಿಷಯವನ್ನು ನಿಪಿ-60, ಸ್ಟಾಕ್ ರಿಜಿಸ್ಟರ್‌ನಲ್ಲಿ & ರಿಡಮ್ಷನ್ ರಿಜಿಸ್ಟರ್‌ನಲ್ಲಿ ನಮೂದು ಮಾಡಿಲ್ಲ.

7. ಆಡಿಟ್ ವರದಿಯಲ್ಲಿ ಯಾವ ಯಾವ ದಾಖಲೆಗಳ ಆಧಾರದ ಮೇಲೆ ನಿಪಿ-60 ನ್ನು ಕೊಟ್ಟಿರುತ್ತಾರೆಂದು ನಮೂದು ಇಲ್ಲ ಎಂದರೆ ಸರಿ. ಅದೇ ರೀತಿಯಾಗಿ ಅದು ಯಾರ ಅವಧಿಯಲ್ಲಿ ಆಗಿದೆ & ಅದಕ್ಕೆ ಯಾರು ಹೊಣೆಗಾರರೆಂದು ನಮೂದು ಇಲ್ಲ ಎಂದರೆ ಸರಿ. ನಿಪಿ-60 ನ್ನು ಪರಿಶೀಲನೆ ಮಾಡಿದ ಬಗ್ಗೆ ಆಡಿಟರ್ ರವರ ಸಹಿ & ಮೊಹರು ಇಲ್ಲ ಎಂದರೆ ಸರಿ.

8. ನಿಮ್ಮ ಅಂತಿಮ ವರದಿಯಲ್ಲಿ ದಿ.24-08-2013 ರಲ್ಲಿ ಆಡಿಟ್ ರವರು ಪರಿಶೀಲನೆ ಮಾಡಿದ ಬಗ್ಗೆ ಅವರ ಸಹಿ ಯಾವುದೇ ದಾಖಲೆಗಳಲ್ಲಿ ಇಲ್ಲ ಎಂದರೆ ಸರಿ. ದಿ.25-06-2013 ರಿಂದ 22-08-2013 ರವರೆಗೆ ಶಿವಕುಮಾರ್ ಎನ್ ರವರು ಒಂದು ಕೀ ಯನ್ನು ಉಪಯೋಗಿಸಿ ಕೀ ಆಪರೇಟ್ ಮಾಡಿದಂತೆ ಸ್ಟಾಕ್ ರಿಜಿಸ್ಟರ್‌ನಲ್ಲಿ ಹಮೂದು ಇದೆ ಎಂದರೆ ಸರಿ. ಸಾಕ್ಷಿಯು ಒಪ್ಪಿಕೊಂಡಿದ್ದರಿಂದ ಸದರಿ ಭಾಗವನ್ನು **ನಿಪಿ-5(ಬಿ)** ಎಂದು ಗುರುತಿಸಲಾಯಿತು. ಸದರಿ ಶಿವಕುಮಾರ್ ಎನ್ ರವರನ್ನು ಈ ಪ್ರಕರಣದ ಸಾಕ್ಷಿಯನ್ನಾಗಿ ಅಥವಾ & ಆರೋಪಿಯನ್ನಾಗಿ ಮಾಡಿಲ್ಲ ಎಂದರೆ ಸರಿ. ಸ್ಟಾಕ್ ರಿಜಿಸ್ಟರ್ ಆಪರೇಟ್ ಮಾಡುವವರ ಕೈಯಲ್ಲಿ ಗೋಲ್ಡ್ ಇರುತ್ತದೆ ಎಂದರೆ ಸರಿ.

9. ಸದರಿ ಗೋಲ್ಡ್ ಯಾರ ಕಸ್ಟಡಿಯಲ್ಲಿರುತ್ತದೆ ಅವರ ವಿಚಾರಣೆ ಮಾಡದೆ ಸರಿಯಾದ ನಿರ್ಧಾರಕ್ಕೆ ಬರಲು ಸಾಧ್ಯವಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಒಬ್ಬ ವ್ಯಕ್ತಿಯ ಕೈಯಲ್ಲಿ ಬಂಗಾರ ಇದ್ದರೆ ಇನ್ನೊಬ್ಬ ವ್ಯಕ್ತಿಯ ಮೇಲೆ ಅಪವಾದ ಮಾಡಲು ಆಗುವುದಿಲ್ಲ ಎಂದರೆ ಸರಿ.

10. ಆರೋಪಿಯ ತಪ್ಪೊಪ್ಪಿಗೆಯನ್ನು ಪಡೆದು, ಆತನ ಸಹಿ ಪಡೆದಿರುತ್ತಾರೆ ಎಂದರೆ ಸರಿ. ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಹಣ ಆರೋಪಿಯ ಸ್ವಂತ ಹಣ ಎಂದರೆ ಸರಿಯಲ್ಲ.

11. ಆರೋಪಿ ಸದರಿ ಬಂಗಾರವನ್ನು ಎಲ್ಲಿ ಮಾರಾಟ ಮಾಡಿದ್ದರು ಎಂದು ನಾನು ತನಿಖೆ ಮಾಡಿಲ್ಲ. ಸದರಿ ಬಂಗಾರವನ್ನು ನಾನು ಜಪ್ತು ಪಡಿಸಿಕೊಂಡಿಲ್ಲ. 1ನೇ ಆರೋಪಿ ದುರುಪಯೋಗ ಪಡಿಸಿಕೊಂಡ ಬಗ್ಗೆ ಸರಿಯಾದ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಬೇರೆಯವರು ಸದರಿ ಕೃತ್ಯದಲ್ಲಿ ಭಾಗಿಯಾಗಿದ್ದರೂ ಸಹ, ಅವರು ಭಾದ್ಯಸ್ಥರು ಎಂದು ಕಂಡು ಬಂದಿದ್ದರೂ ಸಹ 1ನೇ ಆರೋಪಿಯ ಮೇಲೆ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

12. ನೀವು ಚಾಸಾ-22 & 23 ರವರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಎಂದು ಗೊತ್ತಾದರೂ ಸಹ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

**ಅನುಮತಿಯ ಮೇರೆಗೆ ಪಾಟೀಸವಾಲು: 2 ನೇ ಆರೋಪಿ ಪರ ವಕೀಲರಿಂದ:-**

1. ಈ ಪ್ರಕರಣದಲ್ಲಿ ಇಫ್ತೇಖಾರ್ ಹುಸೇನ್ ರವರನ್ನು ಸಾಕ್ಷಿಯನ್ನಾಗಿ ಅಥವಾ ಆರೋಪಿಯನ್ನಾಗಿ ಮಾಡಿಲ್ಲ ಎಂದರೆ ಸರಿ. ಸಾಲ ಪಡೆಯುವ ವ್ಯವಹಾರ ಸಂಸ್ಥೆಯ ಮ್ಯಾನೇಜರ್ ರವರ ಸುಪರ್ಧಿಯಲ್ಲಿ ನಡೆಯುತ್ತದೆ ಎಂದರೆ ಸರಿ.

2. 2 ನೇ ಆರೋಪಿ ರಜೆಯಲ್ಲಿರುವ ಸಂದರ್ಭದಲ್ಲಿ ಇಫ್ತೇಖಾರ್ ಹುಸೇನ್ ರವರು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಾರ್ಜ್ ಪಡೆಯುವ ಸಮಯದಲ್ಲಿ ಹಿಂದಿನ ಕಡತ & ಮಾಲು ಸರಿಯಾಗಿದ್ದರೆ ಮಾತ್ರ ಪಡೆಯುತ್ತಾರೆ ಎಂದರೆ ಸರಿ. ಸದರಿ ಸಂಸ್ಥೆ ಹಣಕಾಸಿನ ಸಂಸ್ಥೆ ಇರುವುದರಿಂದ ರಜೆ ಹಾಕುವ ಸಮಯದಲ್ಲಿ ಚಾರ್ಜ್ ಕೊಡುವುದು & ಪಡೆದುಕೊಳ್ಳುವುದು ಇದ್ದೇ ಇರುತ್ತದೆ ಎಂದರೆ ಸರಿ.

3. ನಿಪಿ-5 ರಲ್ಲಿ ದಿ.22-08-2013 ರಲ್ಲಿ & ದಿ.23-08-2013 ರ ಜೆ ಸಿ ಕಾಲಂ-2 ನಲ್ಲಿ ಇಫ್ತೇಖಾರ್ ಹುಸೇನ್ ರವರ ಸಹಿ ಇದೆ ಎಂದರೆ ಸುಳ್ಳು ಎನ್ನುತ್ತಾರೆ. ನಿಮ್ಮ ಪ್ರಕಾರ ಸದರಿ ಸಹಿಗಳು ಯಾರ ಸಹಿಗಳು ಎಂದರೆ ಸಾಕ್ಷಿಯು ನಾನು ಸದರಿ ರಿಜಿಸ್ಟರನ್ನು ಪರಿಶೀಲಿಸಿಲ್ಲ ಎನ್ನುತ್ತಾರೆ.

4. ಅಂತಿಮ ವರದಿಯನ್ನು ಸಲ್ಲಿಸುವುದಕ್ಕಿಂತ ಮುಂಚೆ ನಿಪಿ-5 ನ್ನು ನೀವು ನೋಡಿಲ್ಲ ಎಂದರೆ ಸರಿ. ನಿಪಿ-5 ನ್ನು ಅಂತಿಮ ವರದಿ ಸಲ್ಲಿಸಿದ ನಂತರ ನ್ಯಾಯಾಲಯಕ್ಕೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

5. ಸದರಿ ಅವಧಿಯಲ್ಲಿ ಇಫ್ತೇಖಾರ್ ಹುಸೇನ್ ರವರು ಸಹ ಕಾರ್ಯ ನಿರ್ವಹಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

6. ಈ ಪ್ರಕರಣಕ್ಕೋಸ್ಕರ 2 ನೇ ಆರೋಪಿಯ ತಪ್ಪೊಪ್ಪಿಗೆಯನ್ನು ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ. 2 ನೇ ಆರೋಪಿಯ ವಿರುದ್ಧ ಸೂಕ್ತ ಸಾಕ್ಷ್ಯಾಧಾರಗಳು ಇಲ್ಲದೇ ಇದ್ದರೂ ಸಹ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. 2 ನೇ ಆರೋಪಿ ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿಂಧನೂರು.**